O.S. No. 298/2021 – –

DW – 1

ದಿನಾಂಕಃ 09.07.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದ –

ನಮ್ಮ ತಂದೆ ಹೆಸರಿಗೆ ಆದಾ ಕಾಳಿಕಾದೇವಿ ರಸ್ತೆಯ ಸ್ವತ್ತಿನ ಕ್ರಯಪತ್ರ ದಾವಣಗೆರೆ Urban Co–operative Bank ನಲ್ಲಿ ಇದೆ. ಮನೆ ಕಟ್ಟಲು ಲೋನ್ ತೆಗೆದುಕೊಳ್ಳಲು ಸದರಿ ದಾಖಲೆಗಳನ್ನು ಬ್ಯಾಂಕ್ ಗೆ ಅಡಮಾನ ಮಾಡಲಾಗಿದೆ. ಬ್ಯಾಂಕಿನಿಂದ ಪಡೆದ ಲೋನ್ 2021 ರಲ್ಲಿ ಮುಕ್ತಾಯವಾಗಿದೆ. ಆ ಸಮಯದಲ್ಲಿ ನಮ್ಮ ತಂದೆ ಮರಣ ಹೊಂದಿದ್ದರು. ಸದರಿ ದಾಖಲಾತಿ ವಾಪಸು ಪಡೆಯಲು ಬ್ಯಾಂಕಿನವರು ನಮ್ಮ 3 ಜನರ ಸಹಿ ಕೇಳಿದ ಕಾರಣ ಸದರಿ ದಾಖಲಾತಿಯನ್ನು ಬ್ಯಾಂಕಿನಿಂದ ವಾಪಸು ತೆಗೆದುಕೊಂಡಿಲ್ಲ. ಸದರಿ ದಾಖಲಾತಿಗೆ ಸಹಿ ಮಾಡಲು ವಾದಿ ಒಪ್ಪಲಿಲ್ಲ. ಸದರಿ ಲೋನ್ ತೆಗೆದುಕೊಳ್ಳಲು 2 ಮನೆ ಪತ್ರಗಳನ್ನು ಆದಾರ ಮಾಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಒಂದು ಕ್ರಯಪತ್ರದ ದೃಡೀಕೃತ ನಕಲನ್ನು ತೋರಿಸಲಾಗುತ್ತಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–10 ಎಂದು ಗುರುತಿಸಲಾಯಿತು. ನಿಪಿ–10 ನಮ್ಮ ತಂದೆ ಹೆಸರಿನಲ್ಲಿರುವ ಕಾಳಿಕಾದೇವಿ ರಸ್ತೆಯ ಸ್ವತ್ತಿನ ಕ್ರಯಪತ್ರದ ದೃಡೀಕೃತ ನಕಲು ಎಂದರೆ ಸರಿ.

ನಮ್ಮ ತಂದೆಗೆ ಓದಲು ಬರೆಯಲು ಬರುತ್ತಿತ್ತು ಎಂದರೆ ಸರಿ. ನಿಡಿ–1 ವಿಲ್ ನ್ನು ನಮ್ಮ ತಂದೆಯ ಸ್ನೇಹಿತರಾದ ಬಕ್ಕೇಶಪ್ಪ ಎಂಬುವವರು ನನಗೆ ತಾಃ 18.03.2021 ರಂದು ನೀಡಿರುತ್ತಾರೆ. ಸಾಕ್ಷಿ ಮುಂದುವರೆದು ನಾವು 3 ಜನ ಮಕ್ಕಳಿಗೆ 3 ಪ್ರತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ–1 ವಿಲ್ ಅನ್ನು 2017 ರಲ್ಲಿ ತಯಾರು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ತಾಃ 22.06.2017 ರಂದು ನಮ್ಮ ತಂದೆಯ ಮಾನಸಿಕ ಸ್ತಿತಿ ಚೆನ್ನಾಗಿತ್ತು. ಅವರಿಗೆ ಪ್ರತಿಯೊಂದರ ಅರಿವಿತ್ತು. ನಿಡಿ–1 ರ ಅಂಶಗಳನ್ನು ನಾನು 2021 ರಲ್ಲಿ ಓದಿ ತಿಳಿದುಕೊಂಡಿದ್ದೇನೆ. ನಮ್ಮ ತಂದೆಗೆ ನಮ್ಮ ಕುಟುಂಬದ ಸ್ವತ್ತುಗಳ ಚಕ್ಕುಬಂದಿ, ಸ್ವತ್ತಿನ ಸಂಖ್ಯೆ ಬಗ್ಗೆ ಪರಿಪೂರ್ಣ ಮಾಹಿತಿ ಇತ್ತು. ಕಾಳಿಕಾದೇವಿ ರಸ್ತೆಯ ಸ್ವತ್ತಿನ ಚಕ್ಕುಬಂದಿ ಹೇಳಲು ನೆನಪಿಲ್ಲ. ನಿಡಿ–1 ರಲ್ಲಿ ನನಗೆ ಬರೆದಂತಹ ಸ್ವತ್ತಿನ ಚಕ್ಕುಬಂದಿ ಹೇಳಲು ನೆನಪಿಲ್ಲ.

ನಮ್ಮ ತಂದೆಯವರಿಗೆ ವಿಲ್ ಬರೆಯುವ ಸಮಯದಲ್ಲಿ ಅವರ ಮಾನಸಿಕ ಸ್ತಿತಿ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ–1 ರಲ್ಲಿ ವಾದಿಯ ಭಾಗಕ್ಕೆ ತೋರಿಸಿರುವ ಸ್ವತ್ತಿನ ವಿಸ್ತೀರ್ಣ, ಆಸ್ತಿಯ ಸಂಖ್ಯೆ ಸರಿ ಇದೆ. ಸದರಿ ಸ್ವತ್ತಿನ ಪೂರ್ವಕ್ಕೆ ಕಾಳಿಕಾದೇವಿ ಮುಖ್ಯ ರಸ್ತೆ, ಪಶ್ಚಿಮಕ್ಕೆ 18/2 ರ 2 ನೇ ಮಳಿಗೆ, ಉತ್ತರಕ್ಕೆ ಹಿಜಾರ್ದಾರ್ ಗಲ್ಲಿ, ದಕ್ಷಿಣಕ್ಕೆ ಮಹೇಂದ್ರ ಹಾಗೂ ನಮಗೂ ಸೇರಿದ ಕಾಮನ್ ವಾಲ್ ಎಂದು ನಮೂದಾಗಿದೆ ಎಂದರೆ ಸರಿ. ನಿಡಿ–1 ನಮ್ಮ ತಂದೆ ತಯಾರು ಮಾಡಿದ ವಿಲ್ ಅಲ್ಲ ಎಂದರೆ ಸರಿಯಲ್ಲ.

ಕಾಳಿಕಾದೇವಿ ರಸ್ತೆಯಲ್ಲಿ ರುವ ದಾವಾ ಐಟಂ ನಂ. 2 ರ ಪೂರ್ವಕ್ಕೆ ಕನ್ಸ ರ್ ವೆನ್ಸಿ, ಪಶ್ಚಿಮಕ್ಕೆ ಕಾಳಿಕಾದೇವಿ ಮುಖ್ಯ ರಸ್ತೆ, ಉತ್ತರಕ್ಕೆ ಮಹೇಂದ್ರ ಹಾಗೂ ನಮಗೂ ಸೇರಿದ ಕಾಮನ್ ವಾಲ್, ದಕ್ಷಿಣಕ್ಕೆ ಹಿಜಾರ್ದಾರ್ ಗಲ್ಲಿ ಎಂದರೆ ಸರಿ. ಸಾಕ್ಷಿಗೆ ಒಂದು ಕಚ್ಚಾ ನಕಾಶೆಯನ್ನು ತೋರಿಸಲಾಗುತ್ತಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ–11 ಎಂದು ಗುರುತಿಸಲಾಯಿತು. ನಮ್ಮ ತಂದೆಗೆ ಆರೋಗ್ಯ ಮತ್ತು ಮಾನಸಿಕ ಸ್ತಿತಿ ಸರಿಯಾಗಿದ್ದಲ್ಲಿ ಚಕ್ಕುಬಂದಿಯನ್ನು ಸರಿಯಾಗಿ ನೀಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಸಾಕ್ಷಿದಾರರು ಮಿಲಾಪಿಯಾಗಿ ನಿಡಿ–1 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ತುಮ್ಮಿನಕಟ್ಟೆ ಗ್ರಾಮದಲ್ಲಿ ಇದ್ದ ಜಮೀನನ್ನು ಬಿಟ್ಟು ಬಂದು ನಮ್ಮ ತಂದೆ ದಾವಣಗೆರೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಜಮೀನನ್ನು ಯಾರು ಸಾಗುವಳಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಸದರಿ

ಜಮೀನಿನ ಬಗ್ಗೆ ನಮ್ಮ ಬಳಿ ಪ್ರಸ್ತಾಪ ಮಾಡಿಲ್ಲ. ನನ್ನ ತಾಯಿಯ ತಂದೆ ಸಹ ತುಮ್ಮಿನಕಟ್ಟೆ ಗ್ರಾಮದವರು ಎಂದರೆ ಸರಿ. ನಿಡಿ-1 ರಲ್ಲಿ ನಮೂದಿಸಿರುವ ಸ್ವತ್ತುಗಳು ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಹಾಗೂ ಪ್ರತಿವಾದಿಯರಿಗೆ ಸಮನಾದ ಹಿಸ್ಸೆ ಇದೆ ಎಂದರೆ ಸಾಕ್ಷಿಯು ನಮ್ಮ ತಂದೆ ಏನು ನೀಡಿದ್ದಾರೋ ಆ ಪ್ರಕಾರ ಹಿಸ್ಸೆ ಇದೆ ಎಂದು ನುಡಿಯುತ್ತಾರೆ. ನಾನು ನನ್ನ ಪ್ರತಿವಾದ ಪತ್ರ ಹಾಗೂ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಅಂಶಗಳನ್ನು ನಮೂದಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ